## ಮುಖ್ಯಮಂತ್ರಿ ಚಂದ್ರು, ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ

## ವಿಕಿಪೀಡಿಯಾ ಮಾದರಿಯಲ್ಲಿ ಕನ್ನಡ ವಿದ್ಯುನ್ಮಾನ ಜ್ಞಾನಕೋಶ

ಕನ್ನಡದಲ್ಲಿ ವಿಕಿಪೀಡಿಯಾ ಮಾದರಿಯಲ್ಲಿ ಒಂದು ಜ್ಞಾನಕೋಶವನ್ನು ತಯಾರಿಸಿದ್ದು, ಈ ಜ್ಞಾನಕೋಶವು ಕನ್ನಡ ಭಾಷೆಯ ಮೂಲಕ ಪ್ರಸ್ತುತ ಜಗತ್ತಿನ ಜ್ಞಾನ, ಮಾಹಿತಿ, ವಿವೇಕ ಎಲ್ಲವನ್ನೂ ಪಡೆಯುವುದು ಮತ್ತು ಹಂಚಿಕೊಳ್ಳುವುದು. ಕನ್ನಡ ಭಾಷೆಗೆ ತನ್ನದೇ ಆದ ವಿಶೇಷ ಶಕ್ತಿ ಇದೆ. ಕನ್ನಡ ಭಾಷೆಯಲ್ಲಿ ಪಂಪ, ರನ್ನ, ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ ಮುಂತಾದವರು ಶ್ರೇಷ್ಠ ಸಾಹಿತ್ಯ ರಚನೆ ಮಾಡಿದ್ದಾರೆ.

ನಮ್ಮ ನಾಡಿನ ವಿದ್ಯಾವಂತರು ಮತ್ತು ವಿದ್ಯೆ ಇಲ್ಲದ ಸುಸಂಸ್ಕೃತ ಜನರ ನಡುವೆ ಎಷ್ಟೋ ರೀತಿಯ ಮಾಹಿತಿ, ಜೀವನಕ್ಕೆ ಬೇಕಾದ ಜ್ಞಾನ ಹಂಚಿ ಹೋಗಿದೆ. ಎಲ್ಲಾ ವರ್ಗದ ಜನರಲ್ಲೂ ಎಲ್ಲಾ ವೃತ್ತಿಯ ಜನರಲ್ಲೂ ಅವರದೇ ಆದ ರೀತಿಯ ಜ್ಞಾನಗಳಿವೆ. ಕನ್ನಡದ ವಿದ್ಯುನ್ಮಾನ ಜ್ಞಾನಕೋಶವಾದ (ಕಣಜ) ಈ ಹಂಚಿ ಹೋಗಿರುವ ಜ್ಞಾನವನ್ನು ಒಂದೆಡೆ ಸಿಗುವ ಕೆಲಸ ಮಾಡುತ್ತಿದೆ. ಪ್ರಪಂಚದಲ್ಲಿರುವ ವಿವಿಧ ಮಾಹಿತಿಯನ್ನು ಕನ್ನಡದ ಮೂಲಕ ತರುವ ಕನಸು ಹೊತ್ತಿದೆ. ಹೊಸ ಸಂಶೋಧನೆಗಳು, ಕ್ರೀಡೆ, ಮನರಂಜನೆ, ಶೈಕ್ಷಣಿಕ ವಿಚಾರಗಳನ್ನು ಕನ್ನಡದಲ್ಲಿ ಸುಲಭವಾಗಿ ಸಿಗುವ ಹಾಗೆ ಮಾಡುವ ಜವಾಬ್ದಾರಿಯು ಇದಾಗಿದೆ.

ಕಡೆಯದಾಗಿ ಇದುವರೆಗೂ ಐ.ಟಿ. ಕ್ಷೇತ್ರಕ್ಕೆ ಕರ್ನಾಟಕ ಯಾವ ರೀತಿಯಲ್ಲಿ ಬೆಂಬಲ ನೀಡುತ್ತಾ ಬಂದಿತ್ತೋ ಅದರ ಫಲವನ್ನು ಕನ್ನಡಿಗರಿಗೆ ತಲುಪಿಸುವ ಹಂತ ಇದಾಗಿದೆ. ಏಕೆಂದರೆ ತಂತ್ರಜ್ಞಾನ ಹೆಚ್ಚು ಕನ್ನಡ ಪರವಾಗುತ್ತಾ ಹೋದಂತೆ ಕನ್ನಡ ಮಾಧ್ಯಮಕ್ಕೆ ಮತ್ತೆ ಬೆಲೆ ಬರುತ್ತದೆ. ವಿದ್ಯಾರ್ಥಿಗಳು, ಶಿಕ್ಷಕರು, ಗ್ರಾಮೀಣ ಪ್ರದೇಶದ ಜನಸಮುದಾಯ, ಸಂಶೋಧಕರನ್ನು, ಮಹಿಳೆಯರನ್ನು ಗಮನದಲ್ಲಿಟ್ಟುಕೊಂಡು ಈ ಕಣಜ ಕೆಲಸ ಮಾಡುತ್ತದೆ. ಮೊದಲಿಗೆ ಕರ್ನಾಟಕಕ್ಕೆ ಸಂಬಂಧಪಟ್ಟ ಮಾಹಿತಿ, ಸಂಪನ್ಮೂಲ ವಿವರಗಳು, ನೆಲ, ಜಲ ಇತ್ಯಾದಿ ಮಾಹಿತಿ ಕಣಜದಲ್ಲಿರುತ್ತದೆ. ನಶಿಸಿ ಹೋಗುತ್ತಿರುವ ಜಾನಪದ, ಹಳ್ಳಿಗಾಡಿನ ವೈದ್ಯ ಪದ್ಧತಿಯ ಪಾರಂಪರಿಕ ಜ್ಞಾನವನ್ನು ಕಣಜ ಸಂಸ್ಕರಿಸುವ ಉದ್ದೇಶವನ್ನು ಹೊಂದಿದೆ. ಆಧುನಿಕ ಜಗತ್ತಿನ, ದೇಶವಿದೇಶಗಳ ಮಾಹಿತಿಗಳನ್ನು ಪ್ರಚಲಿತ ವಿದ್ಯಮಾನಗಳನ್ನು ಕನ್ನಡದಲ್ಲಿ ಸಿಗುವ ಹಾಗೆ ಮಾಡುತ್ತದೆ. ವಿಶೇಷವಾಗಿ ಪಟ್ಟಣ, ಗ್ರಾಮಗಳ ಜನತೆ ಆತ್ಮ ವಿಶ್ವಾಸದಿಂದ ಜಗತ್ತನ್ನು ಎದುರಿಸುವ ಹಾಗೆ ಮಾಡುವುದು ಈ ಕನ್ನಡ ವಿದ್ಯುನ್ಮಾನ ಕೋಶದ ಉದ್ದೇಶ.